



ಗ್ಯಾಲರಿಯಲ್ಲಿ ರಾಮ

ಒಳಗಿನ ವಿಭಾಗ ರಾಜಪರಿವಾರದ ವಾಸ್ತವ್ಯ, ಚಟುವಟಿಕೆಗಳ ತಾಣವಾಗಿದೆ. ಇಲ್ಲಿಗೆ ಸಾರ್ವಜನಿಕರಿಗೆ ಪ್ರವೇಶವಿಲ್ಲ. ಈ ಅರಮನೆಯ ಪ್ರವೇಶಕ್ಕೆ ವಸ್ತ್ರಸಂಹಿತೆಯೂ ಇದೆ. ಶಾರ್ಟ್ಸ್, ಸ್ಲೀವ್‌ಲೆಸ್ ಉಡುಗೆಯಿದ್ದರೆ ಆಫೀಸಿನಲ್ಲಿ ಮೇಲ್ವಸ್ತ್ರವೊಂದನ್ನು ಬಾಡಿಗೆಗೆ ಪಡೆದು ಧರಿಸಿ ಒಳಹೋಗಬೇಕು. ಆಡಳಿತಾತ್ಮಕ ಕಟ್ಟಡಗಳ ವಿನ್ಯಾಸ ಥಾಯ್‌ಶೈಲಿಯನ್ನು ಹೊಂದಿದ್ದರೂ ಯೂರೋಪಿಯನ್ ಪ್ರಭಾವವೂ ಇದೆ. ಆದರೆ, ದೇಗುಲ ಸಮುಚ್ಛಯಗಳದ್ದು ಮಾತ್ರ ಸಂಪೂರ್ಣ ಅಲ್ಲಿಯ ನೆಲದ ಶೈಲಿಯೇ.

ಅರಮನೆಯ ಪ್ರವೇಶದ ಮೊದಲಲ್ಲೇ ಇಬ್ಬರು 'ಯಕ್ಷತವರ್ಣಬಾಲ್' ಎಂಬ ಪುರಾಣಾಧಾರಿತ ದೈತ್ಯ ಕಾವಲುಗಾರ ರಕ್ಕಸರ ಪ್ರತಿಮೆಗಳನ್ನು ನಿಲ್ಲಿಸಿದ್ದಾರೆ. ಪ್ರತಿಮೆಗಳ ರೂಪಾಲಂಕಾರ ನಮ್ಮನ್ನು ಸೆರೆಹಿಡಿಯುತ್ತದೆ. ದೇಗುಲದ ಬಳಿ ಸಾರುವ ಮುನ್ನವೇ ಉದ್ದಾನುದ್ದಕ್ಕೂ ಇರುವ ಮೊಗಸಾಲೆಗಳ ಭಿತ್ತಿಯ ತುಂಬ ರಾಮಾಯಣದ ಉಬ್ಬುಶಿಲ್ಪಗಳ ಚಿತ್ರಣಗಳಿವೆ. ರಾಮ, ಲಕ್ಷ್ಮಣ, ಸೀತೆ, ಹನುಮಂತ, ರಾವಣ– ಹೀಗೆ ಎಲ್ಲ ಪಾತ್ರಗಳು, ಯುದ್ಧ ಸನ್ನಿವೇಶಗಳ ವರ್ಣಚಿತ್ರಣಗಳು. ಅಲ್ಲೇ ಎದುರಾಗುತ್ತವೆ ಪಗೋಡಗಳು, ಗೋಪುರಗಳು, ಕಂಬಗಳು, ಕಿನ್ನರ ಯಕ್ಷ ಪ್ರತಿಮೆಗಳು, ದೇಗುಲಗಳು! ಯಾವ ಕಡೆಗೆ ತಿರುಗಿದರೂ ಅಲ್ಲೊಂದು ಮನಮೋಹಕ ರಚನೆ. ಸಣ್ಣಸಣ್ಣ ಕಂಬಗಳೂ ಕೂಡ ಭವ್ಯಾತಿಭವ್ಯವಾಗಿ ಕಾಣಿಸುತ್ತವೆ.

'ರತ್ನಚೇದಿ', 'ಬೆಲ್‌ಟವರ್' ಎನ್ನುವ ಪಗೋಡಗಳು ಬುದ್ಧತತ್ವಗಳ ಹಸ್ತಪ್ರತಿಗಳನ್ನು ಇಡುವ, ಅವನ ಅವಶೇಷಗಳನ್ನು ಕಾಪಿಡುವ, ಸೂರ್ಯದೇವರ ಆರಾಧನೆಗಿರುವ ದೇಗುಲಗಳು. ಮುಗಿಲೆತ್ತರಕೆ ನಿಂತಿರುವ ಇವುಗಳು ನೀಲಾಗಸದ ಹಿನ್ನೆಲೆಯಲ್ಲಿ ಸೂರ್ಯನ ಹೊನ್ನಬಣ್ಣದಲ್ಲಿ ಥಳಥಳ ಹೊಳಪುಕ್ಕಿಸುತ್ತಾ ಇಡೀ ಪರಿಸರವನ್ನು ಸ್ವರ್ಣನಗರಿಯಾಗಿ ಮಾಡಿಬಿಟ್ಟಿವೆ. ಸೆರಾಮಿಕ್ ಚೂರುಗಳನ್ನು ಹದಗೊಳಿಸಿ ಮುತ್ತಿನಂತೆ ರೂಪಾಂತರಗೊಳಿಸಿ, ಅವುಗಳನ್ನು ಹುದುಗಿಸಿ ರಚಿಸಿರುವ ಪಗೋಡ, ದೇಗುಲಗಳು, ರಥಗಳು ಮುತ್ತಿನ ಮಂಟಪಗಳಂತೆ ಸೆಳೆಯುತ್ತವೆ. ಇವೆಲ್ಲಕ್ಕೂ ಕಳಶವಿಟ್ಟಂತಿದೆ 'ಎಮೆರಾಲ್ಡ್ ಬುದ್ಧ'ನ ದೇಗುಲ. ಈ ದೇಗುಲದ ಮುಂಭಾಗದ ಭಿತ್ತಿ ಪೂರ್ಣ ಸ್ವರ್ಣವರ್ಣದಲ್ಲಿದ್ದು ಸುತ್ತಲೂ ಕಿನ್ನರ ಕಿಂಪುರುಷ, ಯಕ್ಷ, ಗಂಧರ್ವ, ಕಾವಲುರಕ್ಕಸರ ಸುಂದರ ಸಾಲು ಪ್ರತಿಮೆಗಳಿವೆ. ಸೂಕ್ಷ್ಮ ಕುಸುರಿ ಕೆತ್ತನೆಗಳಿವೆ. ಪ್ರತಿಯೊಂದನ್ನೂ ಗಂಟೆಗಟ್ಟಲೆ ನಿಂತು ನೋಡಬಹುದು.

ಒಳಗೆ ಥಾಯ್ ಶೈಲಿಯಲ್ಲಿ ರಚಿತವಾಗಿರುವ ಸ್ವರ್ಣ ಮಂಟಪದಲ್ಲಿರುವ ಬುದ್ಧನ ಮೂರ್ತಿ ಚಿಕ್ಕದು. ಬೇಸಿಗೆ, ಛಳಿ, ಮಳೆಗಾಲಕ್ಕೆ ಹೀಗೆ ವರ್ಷದಲ್ಲಿ ಮೂರು ಬಾರಿ ಬುದ್ಧನ ವಸ್ತ್ರಧಾರಣೆ ನಡೆಯುವುದಂತೆ. ಇದನ್ನು ರಾಜನೇ ನಡೆಸಿಕೊಡುತ್ತಾನೆ. ನಾಡಿನ ಭವಿಷ್ಯ ಕಾಲಕಾಲಕ್ಕೆ ಸುಭದ್ರವಾಗಿರಲಿ ಎನ್ನುವ ಈ ಆಚರಣೆ ಥಾಯ್ಲೆಂಡಿನ ಪ್ರಮುಖ ವಿದ್ಯಮಾನವಂತೆ. ಇಲ್ಲಿ ಫೋಟೋಗ್ರಫಿ ನಿಷಿದ್ಧ ಎಂದು ತಿಳಿಯುವ ಮುಂಚೆಯೇ ನಾನು ಫೋಟೋ ಕ್ಲಿಕ್ಕಿಸಿಬಿಟ್ಟಿದ್ದೆ.

ಒಂದನೇ ರಾಮಾ ದೊರೆಯ ಕಾಲದಲ್ಲಿ ನಿರ್ಮಾಣವಾದ ಈ ಗ್ರ್ಯಾಂಡ್ ಪ್ಯಾಲೇಸ್ ನಿಜಕ್ಕೂ ರತ್ನನಗರಿ, ಸ್ವರ್ಣನಗರಿ, ಮುತ್ತಿನನಗರಿ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ. ಈ ಶೈಲಿಯ ರಚನೆಗಳು ಬರ್ಮಾ, ಕಾಂಬೋಡಿಯಾದಲ್ಲಿಯೂ ಕಾಣಬರುತ್ತದೆ.

ಬ್ಯಾಂಕಾಕ್‌ಗೆ ಹೋದವರು ನೋಡಲೇಬೇಕಾದ ಪ್ರವಾಸೀ ತಾಣವಿದು. ಇಲ್ಲಿಯ ಸುಡು ಬಿಸಿಲು ಶರೀರವನ್ನು ಸುಡುತ್ತಿದ್ದರೂ, ಈ ಅರಮನೆಯ ನಿರ್ಮಾಣಗಳ ಸೆಳೆತದಲ್ಲಿ ಮನಸ್ಸು ತೀರ ತಂಪಾಗಿ, ಯಾವುದೋ ಮಾಯಾಲೋಕದಲ್ಲಿದ್ದಂತೆ ಲಹರಿಯಲ್ಲಿ ಕೊಚ್ಚಿಹೋದೆವು. ನಮ್ಮದೇ ನೆಲದಲ್ಲಿದ್ದಂತೆ ಭಾಸವಾಗುವುದರಿಂದ ಬಿಸಿಲತಾಪ ಅಷ್ಟೇನೂ ಕಾಡುವುದಿಲ್ಲ. ವಾಪಸ್ ಬಂದ ಬಳಿಕವೂ ಪಗೋಡ, ಗೋಪುರ, ಸೂಕ್ಷ್ಮ ಕುಸುರಿ ಕೆತ್ತನೆ, ಅದ್ಭುತ ಶಿಲ್ಪಗಳು, ಮಂಟಪಗಳು, ಬುದ್ಧನ ಪ್ರತಿಮೆಯ ನೆನಪು ಸದಾ ಹಸಿರಾಗಿವೆ.